# ಕನ್ನಡ ಜನತೆಗೆ ಹೊಸ ವಾಹಿನಿ



ಪ್ರತಿ ರಾಜ್ಯೋತ್ಸವದಂದು ಏನಾದರೂ ಹೊಸತನ ಕರ್ನಾಟಕದಲ್ಲಿ ನಡೆಯುತ್ತಿಲಿದೆ. ಈ ಬಾರಿ 'ಕಲ್ಕಿ ಕನ್ನಡ' ಎನ್ನುವ ಹೊಸ ವಾಹಿನಿಯು ಮೊದಲಬಾರಿಗೆ ಹೆಚ್.ಡಿ.ಕ್ವಾಲಿಟಿವುಳ್ಳ ಮನರಂಜನೆಯ ಕಾರ್ಯಕ್ರಮಗಳನ್ನು ನೀಡಲು ಸಜ್ಜಾಗಿದೆ. ಬದಲಾಗುತ್ತಿರುವ ವೀಕ್ಷಕರ ಅಭಿರುಚಿ, ಕಲೆ, ಸಂಸ್ಕೃತಿ ಹಾಗೂ ಅವರ ಆಶೋತ್ತರಗಳನ್ನು ಗಮನದಲ್ಲಿಟ್ಟುಕೊಂಡು ವೈಟ್ ಹಾರ್ಸ್ ನೆಟ್‌ವರ್ಕ್ ಮಾಲೀಕ ಪಿ.ಕೈಲಾಸಂ ನೇತೃತ್ವದಲ್ಲಿ ಮೂಡಿಬರಲಿದೆ. ಹಲವರಿಗೆ ದೇವರ ಮೇಲೆ ಹರಕೆ ಹೊತ್ತು ಹೋಗುವುದು ಕಷ್ಟವಾಗುತ್ತದೆ. ಅಂತಹ ಕೆಲಸವನ್ನು ಕಲ್ಕಿ ತಂಡವು ವೀಕ್ಷಕರು ಇಚ್ಛಿಸುವ ದೇವಾಲಯಗಳಿಗೆ ದರ್ಶನ ಮಾಡಿ ಹರಕೆಯನ್ನು ಈಡೇರಿಸಿಕೊಡುತ್ತದೆ. ಇದು ಯಾರು ಮಾಡದ ಸಾಹಸ ಎನ್ನಬಹುದು.

ಕಾರ್ಯಕ್ರಮದ ಮುಖ್ಯಸ್ಥ ಬಾಲ್‌ರಾಜ್ ನಾಯ್ಡು ಅಧೀನದಲ್ಲಿ ಅನುಬಂಧ, ಅಮ್ನೋರು, ಸೇವಂತಿಸೇವಂತಿ, ಕಲ್ಕಿ ಎಕ್ಸ್‌ಪ್ರೆಸ್ - ಲಕ್ ಇದ್ರೆ ಲಕ್ಷ್ಮಿ, ಪದ್ಮೂಸ್ ಕಿಚನ್, ಪಾನಿಪುರಿ ಮುರಳಿ ಟಿ ೨೦ ಲೈವ್, ವಿಶ್ವರೂಪ, ನಮಸ್ತೆ ಕರುನಾಡು, ಅಭಿಶೇಕ ಇವೆಲ್ಲವನ್ನು ವಾಹಿನಿಯಲ್ಲಿ ನೋಡಿ ಆನಂದಿಸಬಹುದಾಗಿದೆ. ಕನ್ನಡಿಗರ ಮನೆಮನಕ್ಕೆ ಕಲ್ಕಿಕನ್ನಡ ವಾಹಿನಿಯು ಸದ್ಯದಲ್ಲೆ ಬರಲಿದೆ.